ಹೋಗಲು ನಿರಾಕರಿಸುತ್ತಿದ್ದ ಕೋಳಿಯ ಕತ್ತನ್ನು ಸಿಟ್ಟಿನಿಂದ ಕಚ್ಚುತ್ತಿತ್ತು. ತಕ್ಷಣವೇ ಮುಂದಿನ ಆ ಕೋಳಿ ಸತ್ತು ಬಿದ್ದುಬಿಡುತ್ತಿತ್ತು. ಅಷ್ಟೊತ್ತಿಗೆ ಸರದಿಯಲ್ಲಿ ಹಿಂದೆ ಬರುತ್ತಿದ್ದ ಮತ್ತೊಂದು ಕೋಳಿಯೂ ತನ್ನ ಮುಂದಿದ್ದ ಕೋಳಿಯನ್ನು ತಿವಿಯುತ್ತ, ಕಚ್ಚುತ್ತ ಅದರ ಕತ್ತನ್ನೂ ಕಚ್ಚಿ ಉರುಳಿಸುತ್ತಿತ್ತು. ಅದಾದ ಮೇಲೆ ಹಿಂದೆ ಬಂದಿದ್ದ ಇನ್ನೂ ಒಂದು ಕೋಳಿ ತನ್ನ ಮುಂದಿದ್ದ ಕೋಳಿಯ ಕತ್ತು ಕತ್ತರಿಸುತ್ತಿತ್ತು! ಒಂದನ್ನೊಂದು ಕಚ್ಚಿ ಕೊಲ್ಲುವ ಈ ಸರದಿ ಹಾಗೇ ಮುಂದುವರೆಯಿತಷ್ಟೇ



ಅಲ್ಲ, ನೋಡನೋಡುತ್ತಿದ್ದಂತೆಯೇ ಪಂಜರಗಳಲ್ಲಿದ್ದ ಕೊನೆಯ ಒಂದೊಂದು ಕೋಳಿಯನ್ನು ಬಿಟ್ಟು ಇನ್ನುಳಿದ ಎಲ್ಲವೂ ಸತ್ತು ಬಿದ್ದವು! ಸ್ವಲ್ಪ ಹೊತ್ತಿನಲ್ಲಿಯೇ ಪಂಜರಗಳೆಲ್ಲ ಸತ್ತ ಕೋಳಿಗಳ ಗೂಡಾದವು! ಆ ಇಡೀ ವಾತಾವರಣ ಒಮ್ಮೆಲೇ ಮೌನಕ್ಕೆ ಜಾರಿಹೋಗಿತ್ತು.

ಪಂಜರದಲ್ಲಿ ಮುಂದಿದ್ದ ಕೋಳಿಯು, ಚಿಕನ್ ಸೆಂಟರ್‌ನಲ್ಲಿ ತನ್ನ ಕತ್ತನ್ನೇ ಮೊದಲು ಕತ್ತರಿಸುತ್ತಾರೆಂದು ಯೋಚಿಸಿ, ತಾನು ಹಿಂದೆ ಸರಿದು, ತನ್ನ ಹಿಂದಿನದನ್ನು ಮುಂದೆ ತಳ್ಳುತ್ತಿದ್ದ ಚಾಕಚಕ್ಯತೆ ಧರ್ಮಪ್ರಸಾದನಿಗೆ ಅರ್ಥವಾಗಲು ಬಹಳ ಹೊತ್ತೇನೂ ಹಿಡಿಯಲಿಲ್ಲ. ಹಾಗೆ ಮಾಡಿದರೆ ಮಾತ್ರ ತನ್ನ ಜೀವ ಉಳಿಯುತ್ತದೆಯೆಂದು ತರ್ಕಿಸುತ್ತಿದ್ದ ಪ್ರತಿಯೊಂದು ಕೋಳಿಯೂ ತನ್ನ ಮುಂದಿನ ಕೋಳಿಯನ್ನು ಇನ್ನೂ ಮುಂದೆ ಒತ್ತುತ್ತಿತ್ತು. ಅದು ಸರಿಯದಿದ್ದರೆ ಸಿಟ್ಟಿನಿಂದ ಕೊಲ್ಲುವ ಕೃತ್ಯ ಎಸಗುತ್ತಿತ್ತು. ಈ ತಂತ್ರಗಾರಿಕೆ ಧರ್ಮಪ್ರಸಾದನಿಗೆ ಬಹಬೇಗನೇ ಅರ್ಥವಾಗಿ, 'ಎಲಾ ಕೋಳಿಗಳಾ! ನೀವೂ ಇಂದಿನ ರಾಜಕಾರಣಿಗಳ ತಂತ್ರವನ್ನೇ ಚಾಲೂ ಮಾಡಿಬಿಟ್ಟಿರುವಿರಲ್ಲ!' ಎಂದುಕೊಳ್ಳುತ್ತ ತನ್ನ ಬಾಯ ಮೇಲೆ ಬೆರಳಿಟ್ಟುಕೊಂಡ.

'ಓಹೋ! ಅದೆಷ್ಟು ತಿಳುವಳಿಕೆ ಬಂದಿದೆ ಈ ಕೋಳಿಗಳಿಗೆ!' ಎಂದು ಒಳಗೊಳಗೇ ನಕ್ಕ ಧರ್ಮಪ್ರಸಾದ್, 'ಅಬ್ಬಾ, ತುಂಬ ಒಳ್ಳೆಯದೇ ಆಯ್ತಲ್ಲಾ ಇದರಿಂದ, ಇಷ್ಟೊಂದು ಕೋಳಿಗಳ ಕುತ್ತಿಗೆ ಕತ್ತರಿಸಲು ನಾನು ಈ ನೌಕರರಿಗೆ ಅದೆಷ್ಟು ಖರ್ಚು ಮಾಡಬೇಕಿತ್ತಲ್ಲವೆ? ಅಷ್ಟೇ ಸಮಯವೂ ಬೇಕಾಗುತ್ತಿತ್ತಲ್ಲವೆ? ಆ ಭಾರವನ್ನು ಈ ಕೋಳಿಗಳು ತಂತಾವೇ ಹಗುರ ಮಾಡಿದವಲ್ಲಾ! ಕೊಲ್ಲುವ ಕೆಲಸಗಾರರಿಗೆ ಕೊಡುವ ದೊಡ್ಡ ಮೊತ್ತದ ಸಂಬಳವನ್ನೂ ಅವು ತಾವಾಗಿಯೇ ಉಳಿಸಿಬಿಟ್ಟವು! ಈ ಪರಿ ತಿಳುವಳಿಕೆ ಬಂದಿರುವ ಈ ಕೋಳಿಗಳು ಇನ್ನು ಮುಂದೆ ಹೀಗೆಯೇ ಮಾಡುವುದು ಗ್ಯಾರಂಟಿ. ಹೀಗಿರುವಾಗ, ತಾವಾಗಿಯೇ ಸಾಯುತ್ತಿರುವ ಇವುಗಳನ್ನು ಈಗ ನಮ್ಮ ನೌಕರರು ಒಂದೊಂದಾಗಿ ಕೊಲ್ಲುವ ಕಷ್ಟವೇ ಇಲ್ಲ' ಎಂದು ಖುಷಿಪಡತೊಡಗಿದ. ಅದೇ ಖುಷಿಯಲ್ಲಿ ಆತ, 'ಅಹಿಂಸಾ ಚಿಕನ್ ಸೆಂಟರ್'ನಲ್ಲಿ ಇನ್ನು ಮುಂದೆ ಕೋಳಿಗಳನ್ನು ಕೊಲ್ಲಲು ಮೂವತ್ತು ಜನ ಕೆಲಸಗಾರರು ಬೇಕಿಲ್ಲ. ಒಂದನ್ನೊಂದು ತಾವಾಗೇ ಕಚ್ಚಿ ಕಚ್ಚಿ ಕೊಂದುಕೊಳ್ಳುವ ಈ ಕೋಳಿಗಳ ಚರ್ಮ ಸುಲಿದು, ಮಾಂಸ ಬೇರ್ಪಡಿಸುವ ಕೆಲಸಕ್ಕೆ ನಾಲ್ಕೇ ನಾಲ್ಕು ಜನ ಸಾಕು. ಉಳಿದವರೆಲ್ಲ ನಾಳೆಯಿಂದ ಕೆಲಸಕ್ಕೆ ಬರುವುದು ಬೇಡ' ಎಂದು ಫರಮಾನು ಹೊರಡಿಸಿಬಿಟ್ಟ. ಹಾಗೆ ಮಾಡಿ, ಶ್ರಮ, ಸಮಯ, ಹಣ ಎಲ್ಲವನ್ನೂ ಉಳಿಸಿದ ಕೋಳಿಗಳಿಗೆ ಮನಸ್ಸಿನಲ್ಲೇ 'ಒಂದು ದೊಡ್ಡ ಥ್ಯಾಂಕ್ಸ್' ಹೇಳುತ್ತ, ತನ್ನ ಐಷಾರಾಮಿ ಕಾರು ಏರಿ, ಮನೆಯತ್ತ ಓಡಿಸಲು ಡ್ರೈವರನಿಗೆ ಸೂಚಿಸಿದ ಧರ್ಮಪ್ರಸಾದ್. ●